ಹೋದವು. ಛೀ ಎಂದವರು ನನ್ನವರೇ; ಬಾ ಎಂದವರು ನನ್ನವರೇ. ಆದರೆ ನನ್ನ ಪ್ರಾರಬ್ಧಕ್ಕೆ ಯಾರೂ ಹೊಣೆಯಲ್ಲ. ನಾನೇ ಅನುಭವಿಸಬೇಕು' ಎಂದರು ಆ ನಿರ್ವಿಕಾರಿ. ಈಗ ವಯಸ್ಸಾಗಿ ದೇಹದ ಶಕ್ತಿಯೆಲ್ಲಾ ಕುಂದಿಹೋಗಿದ್ದರೂ ಮಕ್ಕಳೆಲ್ಲರ ಊಟವಾಗದ ಹೊರತು ತಾವು ಊಟ ಮಾಡುವುದಿಲ್ಲ. ಮಕ್ಕಳೆಲ್ಲರ ಮೇಲೆ ಅಜ್ಜಿಯ ಪ್ರೀತ್ಯಾದರಗಳನ್ನು ಹೊರಸೂಸುತ್ತದೆ ಆ ಮುಗ್ಧ ಸರಳ ಮುಖ. ಪ್ರಶಸ್ತಿಗಳ ಸುರಿಮಳೆಯು ಆಕೆಯ ಮನಸ್ಸನ್ನೇನಾದರೂ ವಿಚಲಿತಗೊಳಿಸಿತೆ? ಆ ಹಳ್ಳಿಯ ಅವಿದ್ಯಾವಂತ ಮಮತಾಮಯಿಯು ತನ್ನದೇ ಆದ ಭಾಷೆಯಲ್ಲಿ ಹೀಗೆನ್ನುತ್ತಾರೆ: 'ಕೋರಿಯಾಗಿರುವಾಗ ಊರೆಲ್ಲಾ ನೆಂಟರು. ಕೋಲೂರಿ ನಡೆವಾಗ ಯಾವೂರ ಮುದುಕಿ? ಇವೆಲ್ಲಾ ಬಂದವು ಎಂದು ಸಂತೋಷವೂ ಇಲ್ಲ. ಬರಲಿಲ್ಲವೆಂದು ಚಿಂತೆಯೂ ಇಲ್ಲ. ಎರಡೂ ಸಮಾನ.' ಕರ್ಮ ಮಾಡುತ್ತಾ ಮಾಡುತ್ತಾ ಸಂನ್ಯಾಸದ ಸ್ಥಿತಿಯನ್ನು ತಲುಪಿದ ಈಕೆಯನ್ನು ಅವಿದ್ಯಾವಂತರ ಗುಂಪಿಗೆ ಸೇರಿಸಲಾಗುವುದೇ? ನತದೃಷ್ಟೆ ಎಂಬ ಮೂದಲಿಕೆಯನ್ನು ಹೊತ್ತು ಜನಿಸಿದ ಆ ಶಿಶುವು ಇಂದು ಮಹಾನ್ ಆಧ್ಯಾತ್ಮಿಕ ಸತ್ಯತೆಗಳ ಸಾಕಾರಮೂರ್ತಿಯಾಗಿದ್ದಾರೆ. ಶಿಲ್ಪಿಯು ಕೊಟ್ಟ ಸಾವಿರ ಪೆಟ್ಟುಗಳಿಂದಲ್ಲವೇ ಒಂದು ಸುಂದರ ಮೂರ್ತಿಯು ರೂಪುಗೊಳ್ಳುವುದು?

ವಿಳಾಸ:
ಶ್ರೀಮತಿ ಪುಟ್ಟವೀರಮ್ಮನವರ ಆಶ್ರಮ ಟ್ರಸ್ಟ್ (ರಿ.)
ನಂ.೩೦೮, ವಿದ್ಯಾರಣ್ಯಪುರಂ, ವಿಶ್ವೇಶ್ವರ ನಗರ,
ಮೈಸೂರು ೫೭೦ ೦೦೮, ದೂರವಾಣಿ: ೪೮೮೭೭೮೫

# ಸ್ವಾಮಿ ವಿವೇಕಾನಂದ : ಶಕ್ತಿಯ ಸಂಕೇತ

ಡಾ. ಕೆ. ಎಸ್. ಭಗವಾನ್

ಯುಗಪುರುಷರು

ಇಪ್ಪತ್ತನೆಯ ಶತಮಾನ ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಯುಗ. ಈ ಇಬ್ಬರು ಮಹಾಪುರುಷರು ಉಂಟುಮಾಡಿದ ಜಾಗೃತಿ ಇತಿಹಾಸ ಕಂಡಿರುವ ಎಲ್ಲಾ ಧಾರ್ಮಿಕ ಚಳುವಳಿಗಿಂತ ಹೆಚ್ಚು ಪ್ರಕಾಶಮಾನವಾಗಿದೆ. ಧರ್ಮ ಸಮನ್ವಯದ ವಿಚಾರ ಜನರಿಗೆ ಮೊದಲು ಅಲ್ಲೊಮ್ಮೆ ಇಲ್ಲೊಮ್ಮೆ ಅಧ್ಯಯನ ಮಟ್ಟದಲ್ಲಿ ಕಂಡರೂ ಕಾಣದಂತೆ ಸೂಕ್ಷ್ಮವಾಗಿ ಸೂಚಿತವಾಗಿತ್ತು. ಅದು ಪರಮಹಂಸರ ಜೀವನದಲ್ಲಿ ಸಂಪೂರ್ಣ ಸಾಕ್ಷಾತ್ಕಾರ ಪಡೆಯಿತು. ಎಲ್ಲಾ ಧರ್ಮಗಳೂ ಒಂದೇ 'ಧರ್ಮ' ದ ಬೇರೆ ಬೇರೆ ಶಾಖೆಗಳು; ಮನುಷ್ಯರೆಲ್ಲ ಒಂದೇ, ಪ್ರತ್ಯೇಕತೆ ವಿನಾಶಕಾರಿ; ಜಲ, ಪಾನಿ, ವಾಟರ್, ನೀರು ಎಂದು ವಿಧ ವಿಧವಾಗಿ ಹೆಸರಿಸಿದರೂ ವಸ್ತು ಒಂದೇ, ಎಂಬ ಪರಮಸತ್ಯವನ್ನು ಸಾಧನೆಯಿಂದ ಕಂಡುಕೊಂಡ ಅಪೂರ್ವ ಜ್ಯೋತಿಪುರುಷ ಶ್ರೀರಾಮಕೃಷ್ಣ ಪರಮಹಂಸರು. ಒಂದು ಕುಗ್ರಾಮದ ಓದಲೂ ಬರೆಯಲೂ ಬಾರದ ಬಡ ಹುಡುಗ ಮಾನವ ಜನಾಂಗದ ಗುರುಸ್ಥಾನಕ್ಕೆ ಬೆಳೆದದ್ದು ಅತ್ಯಂತ ರೋಮಾಂಚಕಾರಿಯಾದ ಅದ್ಭುತ ಕಥೆ. ತಾವು ಕಂಡ ಮಹಾ ದರ್ಶನವನ್ನು ಜಗತ್ತಿಗೆ ಬಿತ್ತಲು ಆಶಿಷ್ಠರೂ ಬಲಿಷ್ಠರೂ ದ್ರಢಿಷ್ಠರೂ ಧೀರಮತಿಗಳೂ ಅಂತಃಕರಣ ಸಂಪನ್ನರೂ ಆದ ತರುಣರ ತಂಡವನ್ನು ವಿಶೇಷ ಎಚ್ಚರಿಕೆಯಿಂದ ಅವರು ಆರಿಸಿದರು. ಅವರೆಲ್ಲ ಅತಿ ಎತ್ತರಕ್ಕೆ ಬೆಳೆದರು. ಪರಮಹಂಸರ ಶಿಷ್ಯಸಮುದಾಯದ ಹಿಮಾಲಯದಲ್ಲಿ ಸ್ವಾಮಿ ವಿವೇಕಾನಂದರು ಗೌರೀಶಂಕರ ಶಿಖರವಾಗಿದ್ದಾರೆ.

**ವಿವೇಕಾನಂದರ ಪ್ರಖರವಾದ ವ್ಯಕ್ತಿತ್ವ ಮತ್ತು ಸಂದೇಶವನ್ನು ಅಷ್ಟೇ ಪ್ರಖರವಾದ ಭಾಷೆಯಲ್ಲಿ ಚಿತ್ರಿಸಿದರೆ ಅದರ ಪರಿಣಾಮ ಅಪೂರ್ವವಾದುದು. ಈ ಲೇಖನ ಓದುವಾಗ ಅಂತಹ ಅನುಭವವಾಗುತ್ತದೆ. ಡಾ.ಕೆ.ಎಸ್ ಭಗವಾನ್ ಅವರು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರೂ ವಿಭಾಗದ ಮುಖ್ಯಸ್ಥರೂ ಆಗಿದ್ದಾರೆ.**

## ವಿವೇಕಾನಂದರ ಜೀವನಮುಖಗಳು

ಸ್ವಾಮಿ ವಿವೇಕಾನಂದರು ಬದುಕಿದ್ದು ಮೂವತ್ತೊಂಬತ್ತು ವರ್ಷ ಆರು ತಿಂಗಳು ಮಾತ್ರ. (ಜನನ: ೧೨-೧-೧೮೬೩; ಮರಣ: ೪-೭-೧೯೦೨) ಸ್ವಾಮೀಜಿಯ ಸಾಹಸಮಯ ಜೀವನವನ್ನು ಮೂರು ವಿಭಾಗ ಮಾಡಬಹುದು: ವಿದ್ಯಾರ್ಥಿ-ಸಾಧಕ, ಪರಿವ್ರಾಜಕ ಸಂನ್ಯಾಸಿ ಮತ್ತು ವೇದಾಂತ ಪ್ರಚಾರಕ.

ಒಂದು: ವಿದ್ಯಾರ್ಥಿಯಾಗಿದ್ದಾಗ ಪ್ರಾಚ್ಯ ಮತ್ತು ಪಾಶ್ಚಾತ್ಯ ತತ್ತ್ವಜ್ಞಾನವನ್ನೂ ಸಾಹಿತ್ಯವನ್ನೂ ಇಂಗದ ತೃಷೆಯಿಂದ ಓದಿ ಜೀರ್ಣಿಸಿಕೊಂಡಿದ್ದರು. ಗುರುವಿನ ನಿರ್ದೇಶನದಲ್ಲಿ ಸಾಧನೆ ಕೈಗೊಂಡು ಸಾಕ್ಷಾತ್ಕಾರ ಪಡೆದಿದ್ದರು.

ಎರಡು: ತಮ್ಮ ದೇವಗುರುವಿನ ಮಹಾಸಮಾಧಿಯ ನಂತರ ಮಾತೃಭೂಮಿಯನ್ನು ಸುಮಾರು ಆರು ವರ್ಷಗಳ ಕಾಲ ಸತತವಾಗಿ ಸುತ್ತಾಡಿ ಬಂದರು. ತಾಯ್ನಾಡನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದರು. ಜನರ ಕಷ್ಟವನ್ನು ಕಿವಿಗೊಟ್ಟು ಕೇಳಿದರು; ದೇಶದ ಹೀನಸ್ಥಿತಿಗೆ

ಎದೆನೊಂದರು. ಈ ಪರಿವ್ರಾಜಕ ಅವಸ್ಥೆ ಅವರಿಗೆ ಮತ್ತೊಂದು ಬಗೆಯ ಮಹತ್ತರ ಸಾಧನೆಯಾಯಿತು. ಭಾರತದ ಬಡತನವನ್ನು ಕಣ್ಣಾರೆ ಕಂಡರು. ಹೊಟ್ಟೆಗೂ ಬಟ್ಟೆಗೂ ಇಲ್ಲದೆ, ಹೊಟ್ಟೆ ದೊಕ್ಕರಿಸಿಕೊಂಡು ಚಕ್ಕಳ ಮೂಳೆಯಾಗಿ ದುಡಿಯುವ ಜನರನ್ನು ನೋಡಿ ಕಣ್ಣೀರು ಹರಿಸಿದರು; ಜನಸಾಮಾನ್ಯರ ಘೋರ ಅಜ್ಞಾನವನ್ನು ದರ್ಶಿಸಿ ಮಮ್ಮಲ ಮರುಗಿದರು. ವೇದಾಂತ ಬೋಧಿಸುವ ಸರ್ವಸಮಾನತೆ ಎಲ್ಲಿ? ನಿತ್ಯಜೀವನದ ಮೇಲುಕೀಳಿನ ಕಹಿ ಎಲ್ಲಿ? ಎಂದು ಅರಿತು ಹೌಹಾರಿದರು. ನಿಂತಲ್ಲಿ ನಿಲ್ಲದೆ ದೇಶ ಪರ್ಯಟನೆ ಮಾಡುತ್ತಿದ್ದಾಗ ಅರಮನೆ ಗುರುಮನೆಗಳಿಗೆ ಭೇಟಿಕೊಟ್ಟರು; ರಾಜಮಹಾರಾಜರ ಜೊತೆ ಸಂಭಾಷಿಸಿದರು; ಪಂಡಿತರು ಮತ್ತು ಆತ್ಮಜ್ಞಾನಿಗಳ ಕೂಡ ವಾದಿಸಿದರು; ಪಾಮರರೊಡನೆ ಆತ್ಮೀಯವಾಗಿ ಬೆರೆತು ಅವರ ನೋವು ನಿಟ್ಟುಸಿರುಗಳನ್ನು ತೀವ್ರವಾಗಿ ಅನುಭವಿಸಿದರು. ದೀನ ದಲಿತರ ಅಂತಃಕರಣ ಅತ್ಯಂತ ನಿರ್ಮಲವಾಗಿದೆ, ಮಧುರವಾಗಿದೆ ಎಂದು ಸಂಶಯಾತೀತವಾಗಿ ಮನವರಿಕೆ ಮಾಡಿಕೊಂಡರು. ಆದ್ದರಿಂದಲೆ ಅವರ ಕೃತಿಗಳಲ್ಲಿ ಮಾನವೀಯತೆ ಸಾಗರೋಪಮವಾಗಿ ಹರಡಿಕೊಂಡಿದೆ—ಪ್ರಪಂಚವನ್ನೆಲ್ಲ ಪ್ರಾಣವಾಯು ಆವರಿಸಿಕೊಂಡಿರುವಂತೆ. ವಿವೇಕಾನಂದರ ಮಾನವೀಯ ತತ್ವಕ್ಕೆ ಮಹಾಸಾಹಿತಿ ಲಿಯೋ ಟಾಲ್‌ಸ್ಟಾಯ್ ಮಾರುಹೋಗಿದ್ದರು. ವಿವೇಕಾನಂದರ ಆತ್ಮೋದ್ಧಾರಕ ಪ್ರಭಾವದಿಂದ ಮಹಾಕವಿ ಕುವೆಂಪು ಅವರ ಜೀವನ ಪಾವನವಾಯಿತು; ಅವರ ಸಾಹಿತ್ಯ ಲೋಕೋತ್ತರವಾಯಿತು. ಅವರ ಜೀವನ ಪಾವನವಾಯಿತು; ಅವರ ಸಾಹಿತ್ಯ ಲೋಕೋತ್ತರವಾಯಿತು.



ಸ್ವಾಮಿ ವಿವೇಕಾನಂದರು, ಬೆಳಗಾಮಿನಲ್ಲಿ ( ೧೮೯೨ )

ಮೂರು: ವಿವೇಕಾನಂದರು ಅಮೆರಿಕಾ ದೇಶಕ್ಕೆ ಹೋಗಿ ಸರ್ವಧರ್ಮಸಮ್ಮೇಳನದಲ್ಲಿ ಭಾಗವಹಿಸಿ ಭರತಖಂಡಕ್ಕೆ ಅಪಾರ ಕೀರ್ತಿಯನ್ನು ಸಂಪಾದಿಸಿಕೊಟ್ಟರು. ಸಾಮಾನ್ಯವಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ರಿಕ್ತರಂತಿದ್ದ ಭಾರತೀಯರಿಗೆ ಸ್ವಾಭಿಮಾನವನ್ನೂ ಆತ್ಮವಿಶ್ವಾಸವನ್ನೂ ಮೂಡಿಸಿದರು. ಆಧುನಿಕ ಭರತಖಂಡ ವಿವೇಕಾನಂದರಿಗೆ ಎಷ್ಟರಮಟ್ಟಿಗೆ ಋಣಿಯಾಗಿದೆ ಎಂಬುದು ಈಗಾಗಲೇ ಇತಿಹಾಸದ ಭಾಗವಾಗಿದೆ. ಅವರ ಹುಟ್ಟುಹಬ್ಬವನ್ನು ಅಂತರ ರಾಷ್ಟ್ರೀಯ ಯುವ ದಿನಾಚರಣೆ ಎಂದು ವಿಶ್ವಸಂಸ್ಥೆಯ ಮೂಲಕ ಘೋಷಿಸಿ ಪ್ರಪಂಚ ತನ್ನ ದೊಡ್ಡ ಗೌರವವನ್ನು ವಿವೇಕಾನಂದರಿಗೆ ಹಣೆ ಮಣಿದು ಅರ್ಪಿಸಿದೆ.

## ಸಾಧನೆಯಿಂದ ಉನ್ನತಿ

ಸಾಮಾನ್ಯವಾಗಿ ಎಲ್ಲ ಮಹಾಪುರುಷರ ಬದುಕಿನ ಸುತ್ತ ಒಂದು ಬಗೆಯ ಅಲೌಕಿಕ ವಾತಾವರಣ ಆವರಿಸಿಕೊಂಡಿರುವಂತೆ ಭಾಸವಾಗುತ್ತದೆ. ಅಸಾಮಾನ್ಯ ವ್ಯಕ್ತಿಗಳಾಗಿದ್ದರಿಂದ ಅವರಿಗೆ ಆ ಬಗೆಯ ಶಕ್ತಿ ಇತ್ತು ಎಂಬ ಭಾವನೆ ಮಾನವ ಜನಾಂಗದಲ್ಲಿ ರೂಢಿಗೊಂಡಿದೆ. ಆದರೆ ಅವರ ಸುತ್ತ ಪೊರೆ ಕಟ್ಟಿರುವ ನಿಗೂಢತೆಯನ್ನು ಭೇದಿಸಿ ಗಮನಿಸಿದರೆ ಅವರೂ ಇತರರಂತೆ ಸಾಮಾನ್ಯರು ಎಂದು ದೃಢವಾಗಿ ಅರ್ಥವಾಗುತ್ತದೆ. ಅವರು ತಮ್ಮ ಶಕ್ತಿಯನ್ನು ಹರಿದು ಹಂಚಿ ಹೋಗದಂತೆ ಒಂದು ಕಡೆ ಕಟ್ಟಿಹಾಕಿ ತಡೆಗಟ್ಟಿದ್ದರಿಂದ ಅವರು ಶಕ್ತಿಯ ಜಲಾಶಯವಾದರು; ಅಸಾಧಾರಣ ಮಹಾನುಭಾವರೆಂದು ಪರಿಗಣಿತವಾದರು. ಸತತ ಪರಿಶ್ರಮ ಮತ್ತು ಸಾಧನೆಯಿಂದ ಅವರು ಮಹಾಪುರುಷ ಪಟ್ಟ ಮುಟ್ಟಿದರು. ಬೃಹದ್ ದೇವಸ್ಥಾನ ಮತ್ತು ಅರಮನೆಗಳ ಕಳಸ ಗೋಪುರಗಳು ಕಾಣಿಸುತ್ತವೆಯೇ ಹೊರತು ನೆಲದ ಒಡಲಲ್ಲೆ ಮರೆಯಾಗಿರುವ ಅವುಗಳ ಅಸ್ತಿವಾರ ಗೋಚರಿಸುವುದಿಲ್ಲ. ಭೂಮ ವ್ಯಕ್ತಿತ್ವದ ಸಿದ್ಧತೆ ಗೋಪ್ಯವಾಗಿರುತ್ತದೆ. ಆದರೆ ಸಾಮಾನ್ಯ ಮಾನವ ಬುದ್ಧಿ ಮೇಲೇರುವುದಕ್ಕೆ ಹಂಬಲಿಸುವ ಬದಲು ಮಹಾಮಾನವರಿಗೆ ದೈವಿಕತೆಯ ಬಣ್ಣ ತೊಡಿಸಿ ತನಗದು ಸಾಧ್ಯವಿಲ್ಲವೇನೋ ಎಂದು ಸಮಾಧಾನ ಪಟ್ಟುಕೊಳ್ಳುವ ನೆಪ ಹೂಡುತ್ತದೆ; ಆದರೆ ನಿರಂತರ ಸಾಧನೆಯಿಂದ ನರೇಂದ್ರನಾಥ ತನ್ನನ್ನು ತಾನೆ ಕೆತ್ತಿಕೊಳ್ಳುತ್ತ ಲೋಕವಿಖ್ಯಾತ ಸ್ವಾಮಿ ವಿವೇಕಾನಂದರಾದರು.

## ಮಂತ್ರಶಕ್ತಿ

ಅವರು ತಮ್ಮ ಪ್ರತಿಭಾ ವಿಲಾಸದಿಂದ ಮೇಧಾ ಶಕ್ತಿಯಿಂದ ಧೀಮಂತಿಕೆಯಿಂದ ಅಪಾರ ವಿದ್ವತ್ತಿನಿಂದ ವಾಗ್ ವೈಖರಿಯಿಂದ ಪರದುಃಖ ಕಾತರತೆಯಿಂದ ದಲಿತ ಪ್ರೇಮದಿಂದ ದೂರದೃಷ್ಟಿಯಿಂದ ಉದಾತ್ತ ದರ್ಶನದಿಂದ ಉತ್ಕಟ ಜೀವನ ಪ್ರೀತಿಯಿಂದ ಜಗತ್ತಿನ ಹೃದಯ ಮನಸ್ಸುಗಳನ್ನು ಸಹಜವಾಗಿ ಗೆದ್ದುಬಿಟ್ಟರು. ಅವರು ಜ್ಞಾನಿಗಳಲ್ಲಿ ಶ್ರೇಷ್ಠ ಜ್ಞಾನಯೋಗಿ, ಭಕ್ತರಲ್ಲಿ ಪರಮಭಕ್ತ, ಕರ್ಮಯೋಗದಲ್ಲಿ ಉನ್ನತ ಕರ್ಮಯೋಗಿ. ಆದ್ದರಿಂದಲೇ ಅವರ ಮಾತುಗಳಿಗೆ ಹೊಳಪಿದೆ, ಬೆಳಕಿದೆ, ಮಂತ್ರಶಕ್ತಿಯಿದೆ. ಮಂತ್ರ ಎಂದರೇನು? ಅರ್ಥವಾಗದ ಶಬ್ದವೆ? ಅಲ್ಲ. ಗಾಬರಿ ಹುಟ್ಟಿಸುವ

ಶ್ಲೋಕವೆ? ಅಲ್ಲ. ಯಾವ ಮಾತಿನಿಂದ ನಮಗೆ ಶಕ್ತಿ ಬರುತ್ತದೆಯೋ ಅದೇ ಮಂತ್ರ. ಎಂಥ ಶಬ್ದಗಳಿಂದ ನಮಗೆ ಜೀವನದ ಸಮಸ್ಯೆಗಳನ್ನು ಎದುರಿಸಲು ಸಾಹಸಭಾವ ಸ್ಫುರಿಸುತ್ತದೆಯೋ, ಯಾವುದಕ್ಕೂ ಅಂಜದ ಎದೆಗಾರಿಕೆ ಬೆಳೆಯುತ್ತದೆಯೋ ಅದೇ ಮಂತ್ರ. ಒಟ್ಟಿನಲ್ಲಿ ಶಕ್ತಿಕೊಡುವ ಮಾತೆಲ್ಲ ಮಂತ್ರ. ಮಂತ್ರವೆಂದರೆ ಕಾಣದ ಭೂತ ಪಿಶಾಚಿ ದೆವ್ವ ದೇವರನ್ನು ಆವಾಹನೆ ಮಾಡುವ ಅಥವಾ ಓಡಿಸುವ ಜೀವಮಾರಕ ಕೀಲು ತಂತ್ರವಲ್ಲ. ಮನುಷ್ಯನಲ್ಲಿ ಸುಪ್ತವಾಗಿರುವ ಶಕ್ತಿಯ ಸೆಲೆ ಹರಿಯುವಂತೆ ಮಾಡುವ ಸಾಧನವೇ ಮಂತ್ರ. ವಿವೇಕಾನಂದರ ಮಾತುಗಳಿಗೆ ಅಂಥ ಸತ್ವ ಅಗಾಧವಾಗಿದೆ.

### ವಿವೇಕಾನಂದ ವಿಚಾರಧಾರೆ

ವಿವೇಕಾನಂದರ ವಿಚಾರಧಾರೆಯನ್ನು ಮುಖ್ಯವಾಗಿ ಮೂರು ವರ್ಗವಾಗಿ ವಿಂಗಡಿಸಬಹುದು. ಒಂದು—**ಸಾಮಾಜಿಕ ಚಿಂತನೆ**: ಹಿಂದೂ ಧರ್ಮದ ಒಳಿತು ಕೆಡಕು, ಜಾತಿಪದ್ಧತಿ, ಅಸ್ಪೃಶ್ಯತೆ, ಕಿತ್ತುತಿನ್ನುವ ಬಡತನ, ಮೇಲುಕೀಳು ಭಾವನೆ, ಹಿಂದೂ-ಮುಸ್ಲಿಂ ಬಾಂಧವ್ಯ, ಮತಾಂತರ, ಮೀಸಲಾತಿ ಇತ್ಯಾದಿ ಕುರಿತು ಮನಕರಗಿಸುವ ಕ್ರಾಂತಿಕಾರಕ ಆಲೋಚನೆ ಇದೆ. ಎರಡು—**ಧಾರ್ಮಿಕ ಚಿಂತನೆ**: ವೇದಾಂತ, ಸಮಾನತೆ, ಪುರೋಹಿತರಹಿತ ಬದುಕಿನ ಬಗೆಗೆ ಅವರ ಸ್ವಾನುಭವಪೂರ್ಣ ಮಾತುಗಳು ಲೋಕದ ಕಣ್ಣು ತೆರೆಸುತ್ತವೆ.

> ವಿವೇಕಾನಂದರದು ವಿಶ್ವ ದೃಷ್ಟಿ; ಪ್ರಪಂಚದ ಪ್ರತಿಯೊಂದು ಭಾಗವೂ ತನ್ನ ದೇಹದ ಒಂದು ಅಂಶವೆಂಬ ಭಾವವನ್ನು ರಕ್ತಗತ ಮಾಡಿಕೊಂಡಿದ್ದ ಹೃದಯವಂತಿಕೆ ಅವರದು.

ವಿವೇಕಾನಂದರ ಧಾರ್ಮಿಕ ಆಲೋಚನೆಯನ್ನು ಅರಿತುಕೊಂಡ ಮೇಲೆ ನಿಜವಾದ ಧರ್ಮವನ್ನು ಆಚರಿಸುವ ಜನ ಬೆರಳೆಣಿಕೆಗೂ ಸಿಗುವುದಿಲ್ಲವಲ್ಲ ಎಂಬ ವಿಚಾರ ಖಾತರಿಯಾಗುತ್ತದೆ. 'ಧರ್ಮವೆಂದರೆ ಸಾಕ್ಷಾತ್ಕಾರ' ಎಂಬುದು ಅವರ ತ್ರಿಕಾಲಿಕ ವ್ಯಾಖ್ಯೆ. ದೇವರು ಗುಡಿ, ಚರ್ಚು, ಮಸೀದಿಗಳಲ್ಲಿ ಪೂಜಿಸುವ ವಸ್ತುವಲ್ಲ. 'ಅತಿ ಶ್ರೇಷ್ಠವಾದುದೆಲ್ಲ ಭವ್ಯವಾದುದೆಲ್ಲ ವೈಚಾರಿಕವಾದುದೆಲ್ಲ ಪ್ರೀತಿಗೆ ಯೋಗ್ಯವಾದುದೆಲ್ಲ ಮಹತ್ವಪೂರ್ಣವಾದುದೆಲ್ಲ'ವನ್ನು ಅವರು ದೇವರೆಂದು ಕರೆಯುವುದು ಅತ್ಯಂತ ಸಮಂಜಸವಾಗಿದೆ. ಮೂರು—**ಆತ್ಮವಿಶ್ವಾಸ ಮೂಡಿಸುವ ಚಿಂತನೆ**: ಇದಕ್ಕೆ ಅವರ ಜೀವನವೇ ಜ್ವಲಂತ ನಿದರ್ಶನ. ಅವರ ಕೃತಿಶ್ರೇಣಿಯ ಪುಟ ಪುಟಗಳು ಆತ್ಮ ನಂಬಿಕೆಯ ಅಮರ ಸಂದೇಶವನ್ನು ಜಗತ್ತಿಗೆ ಸಾರುತ್ತಿವೆ.

### ಭಾರತಜಾಗರಣ

ಉಸಿರಾಡುತ್ತಿದ್ದರೂ ಸತ್ತಂತಿದ್ದ, ಜಡ್ಡುಗಟ್ಟಿ, ಜೋಮು ಹಿಡಿದಿದ್ದ, ಗೆದ್ದಲು ಕಟ್ಟಿದ ಭಾರತೀಯ ಸಮಾಜವನ್ನು ವಿವೇಕಾನಂದರು ತಿಳಿವಳಿಕೆಯ ವೀರಾವೇಶದಿಂದ ಬಡಿದೆಬ್ಬಿಸಿದರು. ಅದು ನಾನಾ ಸ್ತರಗಳಲ್ಲಿ ಚಾಲನೆಗೊಳ್ಳುವಂತೆ ಮಾಡಲು ತಮ್ಮ ತಪಃಶಕ್ತಿಯನ್ನೆಲ್ಲ ವಿನಿಯೋಗಿಸಿದರು. ಅವರು ಅದಮ್ಯ ಶಕ್ತಿಯ ಸ್ಫೂರ್ತಿದಾಯಕ ಮೂರ್ತಿಯಾಗಿದ್ದರು. ಅವರು ಆವೇಶವಾಗಿ ಬಂದರು, ಮಿಂಚಿನಂತೆ ಹೊಳೆದರು, ಸಿಡಿಲಿನಂತೆ ಗುಡುಗಿದರು,ಧಾರಾಕಾರವಾಗಿ ಜ್ಞಾನದ ಮಳೆಗರೆದರು. ರಾಷ್ಟ್ರಶಕ್ತಿ ಉನ್ಮೀಲನಗೊಂಡಿತು. ಅವರು ಬಿರುಗಾಳಿಯಾಗಿ ಬೀಸಿದರು. ಲೊಡ್ಡು ಮರಗಳೆಲ್ಲ ಬುಡಸಹಿತ ಬಿದ್ದುಹೋದುವು; ತಂಗಾಳಿಯಾಗಿ ತಂಪೆರೆದರು. ಜೀವವಿದ್ದ ವೃಕ್ಷರಾಜಿ ಚಿಗಿತು ಫಲಬಿಟ್ಟಿತು. ಅವರು ಹುಟ್ಟಿದ್ದು ಭಾರತದಲ್ಲಾದರೂ, ತಮ್ಮ ಜನ್ಮಭೂಮಿಯ ಮೇಲೆ ಅವರಿಗೆ ಅಪಾರ ಭಕ್ತಿಯಿದ್ದರೂ ಅವರ ದೃಷ್ಟಿ ಎಂದೂ ಸಂಕುಚಿತವಾಗಿರಲಿಲ್ಲ. ಅವರದು ವಿಶ್ವದೃಷ್ಟಿ; ಪ್ರಪಂಚದ ಪ್ರತಿಯೊಂದು ಭಾಗವೂ ತನ್ನ ದೇಹದ ಒಂದು ಅಂಶವೆಂಬ ಭಾವವನ್ನು ರಕ್ತಗತ ಮಾಡಿಕೊಂಡಿದ್ದ ಹೃದಯವಂತಿಕೆ ಅವರದು.

ವಿವೇಕಾನಂದರು ನುಡಿದದ್ದು ಬರೆದದ್ದು ಇಂದಿಗೆ ಸುಮಾರು ನೂರು ವರ್ಷಗಳ ಹಿಂದೆ. ಆದರೂ ಅವರ ನುಡಿಯ ಕಿಡಿ ಆರಿಲ್ಲ. ಏಕೆಂದರೆ ನಮ್ಮ ಸಾಮಾಜಿಕ ಸಮಸ್ಯೆಗಳು ಹೆಚ್ಚು ಕಡಿಮೆ ಹಾಗೆಯೆ ಇವೆ. ಮೇಲುನೋಟಕ್ಕೆ ಕೊಂಚಮಟ್ಟಿಗೆ ಬದಲಾವಣೆ ಕಂಡರೂ ಅದೇ ಅಜ್ಞಾನ, ಅಸೂಯೆ, ಅಂಧಶ್ರದ್ಧೆ, ಅವಿವೇಕ, ಅಸಮಾನತೆಗಳು ದೆವ್ವಗುಣಿತ ಕುಣಿಯುತ್ತಿವೆ. ಆಗ ಅವು ಕುರುಡು ಬೆಪ್ಪಾಗಿ ಕಂಡರೆ ಈಗ ಜಾಣಪೆದ್ದಾಗಿ ತೋರುತ್ತಿವೆ. ಅಷ್ಟೇ ವ್ಯತ್ಯಾಸ.

### ಅಧ್ಯಾತ್ಮ ಮತ್ತು ವಿಜ್ಞಾನ

ಈ ಬಗೆಯ ಪಿಡುಗುಗಳನ್ನು ಸುಟ್ಟು ಬೂದಿಮಾಡಲು ಅತ್ಯಗತ್ಯವಾದ ಬೆಂಕಿ ಅರ್ಥಾತ್ ಜ್ಞಾನಾಗ್ನಿ, ವಿವೇಕಾನಂದರ ಕೃತಿಗಳಲ್ಲಿ ನಿಹಿತವಾಗಿದೆ. ಆ ಅಗ್ನಿಕುಂಡದಿಂದ ನಮ್ಮೆದೆಯ ಹಣತೆಯನ್ನು ಹಚ್ಚಿಕೊಳ್ಳಬೇಕು. ಆಗ ಕವಿದಿರುವ ಕಗ್ಗತ್ತಲು ಅದರ ಬೆಳಕಿನಲ್ಲಿ ಕೂಡಲೇ ಓಡಿಹೋಗುತ್ತದೆ. ಜ್ಞಾನಜ್ಯೋತಿಯನ್ನು ವಿವೇಕಾನಂದರು ಎರಡು ನಿಟ್ಟಿನಿಂದ ಪೂರೈಸುತ್ತಾರೆ. ಅವು ಅಧ್ಯಾತ್ಮ ಮತ್ತು ವಿಜ್ಞಾನ. ವಿಜ್ಞಾನ ಬಾಳಿನೇಳಿಗೆಯ ವೇಗವರ್ಧಕವಾದರೆ ಅಧ್ಯಾತ್ಮ ಬಾಳು ಅಪಘಾತಕ್ಕೆ ಈಡಾಗದಂತೆ ತಡೆಯುವ ಬಿರಿ. ಅಧ್ಯಾತ್ಮ ಎಂದರೆ ಪರಿಶುದ್ಧವಾಗಿ ಸತ್ವಭರಿತವಾಗಿ ಅಂತರಂಗವನ್ನು ಬೆಳೆಸುವ, ಬೆಳಕನ್ನು ಪಡೆಯುವ ವಿಧಾನ. ಅಧ್ಯಾತ್ಮದ ಕೆಲಸ ಅಂತರಂಗದ ಬೆಳವಣಿಗೆ; ವಿಜ್ಞಾನದ ಕೆಲಸ ಬಹಿರಂಗದ ಬೆಳವಣಿಗೆ. ಒಂದರ ಬೆಳಕಿನಲ್ಲಿ ಇನ್ನೊಂದನ್ನು ನೋಡುತ್ತ ಅದರೊಡನೆ ಇದನ್ನು ಒರೆ ಹಚ್ಚುತ್ತ ಗಟ್ಟಿಯನ್ನು ಸ್ವೀಕರಿಸುವ ಸಾಮರ್ಥ್ಯ ಅವರಿಗೆ ಇತ್ತು. ಇವೆಲ್ಲದಕ್ಕೂ ಮೂಲಾಧಾರವಾಗಿ ಸ್ವಾನುಭವಪೂರ್ಣವಾದ ಜ್ಯೋತಿಸ್ವರೂಪಿಣಿಯಾದ ಆತ್ಮಸಾಕ್ಷಾತ್ಕಾರವಿತ್ತು. ಅಧ್ಯಾತ್ಮದ ಶ್ರೇಷ್ಠತೆಯನ್ನು ವಿಜ್ಞಾನ ಅರಿತುಕೊಂಡದ್ದು, ವಿಜ್ಞಾನದ ಸವಾಲುಗಳನ್ನು

ದಿಟ್ಟವಾಗಿ ಆಧ್ಯಾತ್ಮ ಎದುರಿಸಿದ್ದು ಮೊಟ್ಟಮೊದಲು ಬಹುಶಃ ವಿವೇಕಾನಂದರಲ್ಲಿ ಎನ್ನಬಹುದು. ತುಂಬ ಪ್ರಧಾನವಾದ ಈ ವಿಷಯವನ್ನು **ತೌಲನಿಕ ಧರ್ಮಶಾಸ್ತ್ರ** ನಿರ್ಣಯಿಸಬೇಕಾಗಿದೆ. ತಮ್ಮ ಪ್ರೌಢ ಕೃತಿಯಾದ 'ರಾಜಯೋಗ'ದ ಪ್ರಾರಂಭದ ಪುಟಗಳಲ್ಲಿ ವಿವೇಕಾನಂದರು ಹೇಳುತ್ತಾರೆ : **'ಯೋಗದಲ್ಲಿ ರಹಸ್ಯವಿಲ್ಲ; ರಹಸ್ಯವಿದ್ದರೆ ಅದು ಯೋಗವಲ್ಲ; ಅದನ್ನು ತಿರಸ್ಕರಿಸಿ.'** ವಿಜ್ಞಾನವನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷೆಮಾಡುವಂತೆ ಧರ್ಮವನ್ನು ಸಾಧನೆಯ ಪ್ರಯೋಗಶಾಲೆಯಲ್ಲಿ ಪರೀಕ್ಷೆ ಮಾಡಬೇಕು.

**ವಿವೇಕಾನಂದರ ಜೀವನ ಮತ್ತು ಸಂದೇಶವನ್ನು ಒಂದು ಮಾತಿನಲ್ಲಿ ಹಿಡಿದಿಡಬಹುದು. ಅದು ಶಕ್ತಿ.**

ಯಾವುದು ಧರ್ಮ, ಯಾವುದು ಧರ್ಮವಲ್ಲ; ಯಾವ ಮೌಲ್ಯಗಳು ಬಾಳಿಗೆ ಬಲವನ್ನೂ ಬೆಳಕನ್ನೂ ನೀಡುತ್ತವೆ; ಯಾವುದು ಗಟ್ಟಿ, ಯಾವುದು ಟೊಳ್ಳು; ಯಾವುದನ್ನು ಹಿಡಿಯಬೇಕು, ಯಾವುದನ್ನು ಬಿಡಬೇಕು ಎಂಬ ವಿಚಾರಗಳು ಖಚಿತವಾಗಿ ತಿಳಿಯಬೇಕಾದರೆ ವಿವೇಕಾನಂದರ ಕೃತಿಗಳನ್ನು ಮತ್ತೆ ಮತ್ತೆ ಓದಬೇಕು, ಅಧ್ಯಯನ ಮಾಡಬೇಕು, ಅನುಷ್ಠಾನ ಮಾಡಬೇಕು. ವಿಶ್ವದ ಎಲ್ಲಾ ಅತ್ಯುತ್ತಮ ವಿಚಾರಗಳ ಶ್ರೇಷ್ಠ ಸಂಗಮದಂತೆ ಅವರು ಇದ್ದಾರೆ. ಸಂಗಮ ನಿಂತ ಕೊಳವಲ್ಲ: ಅದು ಹರಿಯುವ ಹೊಳೆ. ಎಲ್ಲಮತಗಳ ಹಿತವೂ ಅಹಿತವೂ ಆದ ಮಗ್ಗುಲುಗಳನ್ನು, ಧರ್ಮ ಸಂಸ್ಥಾಪಕರ ಪ್ರವಾದಿಗಳ ಅವತಾರಿಗಳ ಆಚಾರ್ಯರ ಗುಣಗಳನ್ನು ಹೇಳುವ ಕ್ಷಣದಲ್ಲೆ ಅವರ ಹೀನಸುಳಿಗಳನ್ನು ತೋರಿಸುವ ಪ್ರಾಂಜಲ ಮನಸ್ಸನ್ನು ವಿವೇಕಾನಂದರಲ್ಲಿ ಬಿಟ್ಟರೆ ಬೇರೆಲ್ಲಿ ಕಾಣಲು ಸಾಧ್ಯ?

### ಸಾಕಾರ ಶಕ್ತಿ

ವಿವೇಕಾನಂದರ ಜೀವನ ಮತ್ತು ಸಂದೇಶವನ್ನು ಒಂದು ಮಾತಿನಲ್ಲಿ ಹಿಡಿದಿಡಬಹುದು. ಅದು ಶಕ್ತಿ. ಮನುಷ್ಯರನ್ನು ಶಕ್ತಿವಂತರನ್ನಾಗಿ ವೀರ್ಯವಂತರನ್ನಾಗಿ ಪುರುಷಸಿಂಹರನ್ನಾಗಿ ಮಾಡುವುದೇ ಅವರ ಬದುಕಿನ ಪರಮ ಗುರಿಯಾಗಿತ್ತು. ಅವರ ಭಾಷಣಗಳನ್ನೂ ಬರವಣಿಗೆಯನ್ನೂ ಸಂವಾದಗಳನ್ನೂ ಪತ್ರಗಳನ್ನೂ ಪಠಣ ಮಾಡುವುದರಿಂದ ವಾಚಕರಿಗೆ ಶಕ್ತಿಯ ಅನುಭವ ಯಥೇಚ್ಛವಾಗಿ ಆಗುತ್ತದೆ. ನಮ್ಮ ಅನಂತ ಶಕ್ತಿಯ ಬಗ್ಗೆ ನಮಗೆ ಅರಿವು ಮೂಡಿ, ಏನು! ನಮಗೆ ಇಷ್ಟೊಂದು ಶಕ್ತಿಯಿದೆಯೇ?ಎಂದು ನಾವೇ ಸೋಜಿಗಪಡುವಂತಾಗುತ್ತದೆ. ವಿವೇಕಾನಂದರನ್ನು ಓದುವಾಗ ಕುಲುಮೆಯಲ್ಲಿ ಕುಳಿತಂತೆ ತೋರುತ್ತದೆ; ಅತ್ಯಂತ ಜಡ ವ್ಯಕ್ತಿಯೂ ಚೈತನ್ಯದ ಚಿಲುಮೆಯಾಗುತ್ತಾನೆ. ವಿದ್ಯುತ್ತು ಮುಟ್ಟಿಕ್ಕಿದರೆ ಮೈಮನಗಳೆಲ್ಲ ಕಂಪಿಸುವಂತೆ ಅವರ ಉಪದೇಶ ದಿಂದ ರೋಮಾಂಚನವಾಗುತ್ತದೆ. ಗಾಳಿ ತುಂಬಿದ ಚೆಂಡಿನಂತೆ ಜೀವ ಪುಟಿಯುತ್ತದೆ; ಒಣಗಿದ ಭೂಮಿಗೆ ಮಳೆ ಬಿದ್ದಂತೆ ಜೀವನೋಲ್ಲಾಸ ನರನಾಡಿಯನ್ನೆಲ್ಲ ವ್ಯಾಪಿಸುತ್ತದೆ. ಪ್ರಪಂಚದ ಜ್ಞಾನರಾಶಿಯಲ್ಲಿ ವಿವೇಕಾನಂದರು ಬಹುವಾಗಿ ಪ್ರೀತಿಸಿ ಮೆಚ್ಚಿದ್ದ ಕೃತಿರತ್ನಗಳೆಂದರೆ ಉಪನಿಷತ್ತುಗಳು. ಅವು ಶಕ್ತಿಯನ್ನು, ಮಾನವ ಶಕ್ತಿಯನ್ನು, ಅತಿಶಯವಾಗಿ ಕೊಂಡಾಡುತ್ತವೆ. ವಿವೇಕಾನಂದರು ಅಂಥ ಶಕ್ತಿಯ ಜೀವಂತ ಪ್ರತಿರೂಪವಾಗಿದ್ದರು. ತೇಜಃಪುಂಜ ವಾಗಿದ್ದರು, ಉಪನಿಷತ್ತುಗಳೇ ಮೈವೆತ್ತಂತೆ ಇದ್ದರು. '**ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ; ದೌರ್ಬಲ್ಯವನ್ನು ತ್ಯಜಿಸಿ**' ಎಂದು ಗೆಳೆಯನಂತೆ, ಗುರುವಿನಂತೆ, ತಾಯಿಯಂತೆ ಹೇಳಿದ್ದಾರೆ.

ಮನೆಯ ಕಸ ಗುಡಿಸುತ್ತೇವೆ. ಒಮ್ಮೆ ಗುಡಿಸಿದೆ ಅಂತ ಸುಮ್ಮನಿರುವುದಿಲ್ಲ. ಪದೇ ಪದೇ ಸ್ವಚ್ಛ ಮಾಡುತ್ತೇವೆ. ಮನೆಯಲ್ಲಿ ಕಸ ಸೇರುವಂತೆ ಮನಸ್ಸಿನಲ್ಲೂ ಕಸ ಶೇಖರಣೆಯಾಗುತ್ತದೆ, ಗೊತ್ತಿಲ್ಲದಂತೆ. ಅದನ್ನು ತೊಡೆಯಲು ಮಹಾತ್ಮರ ಜೀವನ ಮತ್ತು ಸಂದೇಶಗಳೆ ಸರಿಯಾದ ಸಾಧನ. ಆದ್ದರಿಂದ ದೊಡ್ಡ ವಿಚಾರಗಳಲ್ಲಿ ಮನಸ್ಸನ್ನು ನೆನೆಸಬೇಕು, ಕುದಿಸಬೇಕು, ಅರಳಿಸಬೇಕು. ನಮ್ಮನ್ನು ಉಳಿಸುವ ಬೆಳೆಸುವ ಪ್ರಬಲ ಪ್ರಗತಿಪರ ಶಕ್ತಿಯಾಗಿದ್ದಾರೆ ವಿವೇಕಾನಂದರು. ತೀವ್ರ ಹಸಿವಾದಾಗ ಆಹಾರ ಸಿಗದಿದ್ದರೆ, ಕಡು ಬಾಯಾರಿಕೆಯಾದಾಗ ಕುಡಿಯಲು ನೀರಿಲ್ಲದಿದ್ದರೆ ಸತ್ತೇಹೋಗುತ್ತೇನೆಂಬ ಯಾತನೆ ಉಂಟಾಗುವಂತೆ ಜ್ಞಾನಗಳಿಕೆಯ ವಿಷಯದಲ್ಲಿ ವ್ಯಾಕುಲ ಉಂಟಾಗಬೇಕು. ಆಗ ಬಾಳು ಬೆಳಕಾಗುತ್ತವೆ, ಜೀವ ಅಮೃತವಾಗುತ್ತದೆ. ❋

## ಆಧ್ಯಾತ್ಮಿಕತೆಯ ನಿಧಿ

ಸ್ವಾಮಿ ವಿವೇಕಾನಂದರು ಸಂಪೂರ್ಣ ದೇವತ್ವದಲ್ಲಿ ನೆಲೆಸಿದ ಮಹಾಪುರುಷರು. ಅವರ ಮನಸ್ಸು ಸದಾ ದೈವತ್ವದಲ್ಲಿ ನೆಲೆಸಿರುತ್ತಿತ್ತು. ನಮ್ಮಲ್ಲಿ ಹಣವಿದ್ದರೆ ಮಾತ್ರವೇ ಯಾರಿಗಾದರೂ ಕೊಡಬಲ್ಲೆವು. ಸ್ವಾಮೀಜಿಯವರು ಆಧ್ಯಾತ್ಮಿಕತೆಯನ್ನು ಹೇಗೆ ಶೇಖರಿಸಿಕೊಂಡಿದ್ದರೆಂದರೆ ಇತರರಿಗೆ ಅದನ್ನು ಹಣದಂತೆ ನೀಡಬಲ್ಲವರಾಗಿದ್ದರು. ಸ್ವಾಮೀಜಿಯವರು ನ್ಯೂಯಾರ್ಕ್‌ನಲ್ಲಿ ಭಾಷಣಗಳನ್ನು ನೀಡುತ್ತಿದ್ದ ಸಮಯದಲ್ಲಿ ಮುಂದೆ 'ಸಿಸ್ಟರ್ ದೇವಮಾತಾ' ಎಂದು ಪ್ರಸಿದ್ಧಳಾದ ಆಂಗ್ಲ ಮಹಿಳೆಯು ಬರುತ್ತಿದ್ದಳು. ಅವಳ ಬಳಿ ಐರ್ಲ್ಯಾಂಡ್‌ನ ಒಂದು ನಾಯಿ ಇತ್ತು. ಸ್ವಾಮಿ ವಿವೇಕಾನಂದರು ಕೆಲವೊಮ್ಮೆ ಆ ನಾಯಿಯ ಮೈದಡವುತ್ತಾ ತಲೆಯನ್ನು ಮೃದುವಾಗಿ ಸವರುತ್ತಾ ಪ್ರೀತಿಯಿಂದ 'ಇದು ಒಂದು ದೊಡ್ಡ ಯೋಗಿ' ಎಂದ ತಕ್ಷಣವೇ ಅದು ನೆಟ್ಟಗೆ ಸಮಾಧಿಯಲ್ಲಿನ ಯೋಗಿಯಂತೆ ನಿಂತುಬಿಡುತ್ತಿತ್ತು!

ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ, ಪುಟ [illegible]